ಎಬ್ಬಿಸಿದವರೇ ಮಗುವತ್ತ ಬಾಗಿ – ಕೌಶಿಕನ ಕಿವಿಯಲ್ಲಿ 'ನನ್ನ ಬಂಗಾರದ ಮೂಟೆಯೇ...' ಎಂದು ಮೆಲುವಾಗಿ ಅಂದಿದ್ದೇ ತಡ – ಕೌಶಿಕ ಎದ್ದುಕೂತು 'ಅಪ್ಪನನ್ನು ಹುಲಿ ಕೈಯಲ್ಲಿ ಕಚ್ಚಿಸ್ತೇನಿ... ಮಗ್ಗಿ ಹೇಳಲ್ಲ' ಎಂದು ಮೆತ್ತಗೆ ಹೇಳಿ, ಮತ್ತೆ ಮಲಗಿ ಹಾಗೇ... ದಿಟ್ಟಿಸುತ್ತಾನೆ... ಊರಿನ ಅಜ್ಜಯ್ಯ ಕೂತಿದ್ದಾರೆ !! ಆತನೆದುರು ಸ್ವರ್ಗವೇ ಭೂಮಿಗಿಳಿದಿದೆ !! ಜ್ವರ ಕುದಿಯುತ್ತಿದ್ದರೂ ಕ್ಷೀಣವಾಗಿ ನಗು ಮುಖಮಾಡಿ ಅಜ್ಜಯ್ಯನತ್ತ ಕೈ ಚಾಚಿದ್ದ. ಆ ದೃಶ್ಯ ನೋಡುತ್ತಲೇ ಕುಮುದ ಒಂದಿಷ್ಟು ಗೆಲುವಾಗಿ ಅಡುಗೆಮನೆ ಕಡೆ ನಡೆದಿದ್ದಳು.

ಅಜ್ಜ, ಮೊಮ್ಮಗನನ್ನು ಮಲ್ಲಿಗೆ ದಂಡೆಯ ಹಾಗೆ ಮುದ್ದಿನಿಂದ ಎತ್ತಿಕೊಂಡು ಹೆಗಲಮೇಲೆ ಹಾಕಿಕೊಳ್ಳುವಷ್ಟರಲ್ಲಿ ಸ್ನಾನದ ಮನೆಯಿಂದ ಹೊರಬಂದ ಅಕ್ಷಯಕುಮಾರನನ್ನು ಕಂಡ ರಾಮಯ್ಯಾಳ್ವರು–

'ಎಂಟ್ರೆನ್ಸ್ ಪರೀಕ್ಷೆ ಯಾವಾಗಪ್ಪ ಇವ್ನಿಗೆ... ಅಲ್ಲಿಯವರೆಗಾದ್ರೂ ನಾನಿಲ್ಲೆ ಇರ್ತೀನಿ... ಅದು ಮುಗಿದ ಕೂಡಲೇ ಇವರಿಬ್ರನ್ನೂ ಊರಿಗೆ ಕರೆದುಕೊಂಡು ಹೋಗ್ತಾ ನಾನು...'

'ಏನೂ ಬೇಡ ಮಾವಣ್ಣ... ಇವನನ್ನು ಎಂಟ್ರೆನ್ಸ್ ಎಕ್ಸಾಂಗೆ ರೆಡಿ ಮಾಡಿಸಿ ಪಾಸು ಮಾಡಿಸಿ, ಸೀಟು ಸಿಕ್ಕ ನಂತರದಲ್ಲಿ ಒಂದು ವರ್ಷದ ಪಾಠವನ್ನು ಮೊದಲೇ ಓದಿಸಿ ಇವನನ್ನು ಮುಂದಿನ ವರ್ಷಕ್ಕೆ... ರೆಡಿ ಮಾಡಿಸಿದ್ರೆ ಮಾತ್ರವೇ ಇಂವ ಮುಂದೆ ಬರ್ಬಹುದಂತೆ; ಬಹಳ ಕಷ್ಟ ಇದೆಯಂತೆ ಐಸಿಎಸ್ಸಿ ಸಿಲಬಸ್... ಶಾಲೆಯ ಪ್ರಿನ್ಸಿಪಾಲೇ ಹೇಳಿದ್ರು ನಂಗೆ...'

ತನ್ನ ಮಾತಿಗೆ ಮಾವ ಮೌನವಾಗಿರುವುದನ್ನು ಕಂಡು ಅಕ್ಷಯಕುಮಾರ ಮತ್ತೂ ಒಂದಷ್ಟು ಮಾತು ಮುಂದುವರಿಸಿದ್ದ. 'ನಿಮ್ಮ ಮೊಮ್ಮನಿಗೆ ನಾನು ದಿನಾ ಮಗ್ಗಿ ಕಲಿಸ್ತೀನಿ, ಬರಿಸ್ತೀನಿ, ಕೂಡು ಕಳೆಯೋದು ಕಲಿಸ್ತೀನಿ; ಆದ್ರೆ, ಕಲಿಸಿ ಅರ್ಧಗಂಟೇಲಿ ಮತ್ತೆ ಮಗ್ಗಿ ಕೇಳಿದ್ರೆ ಬಾಯಿಗೆ ಬಂದದ್ದನ್ನು ಹೇಳ್ತಾನೆ! ನಾನು ಆಫೀಸಿಗೆ ಹೋದೊಡನೆ ಮನೆಯ ಗೋಡೆಯ ಮೇಲೆ ಸರಿಯಾಗಿಯೆ ಮಗ್ಗಿ ಬರೆದು... ಇವನ ಅಮ್ಮನಿಗೆ ತೋರಿಸ್ತಾನೆ. ಶಾಲೆಯಲ್ಲಿ ಪರೀಕ್ಷೆಯಲ್ಲಿ ಸರಿಯಾಗಿ ಬರಿ ಅಂದ್ರೆ... ಎಲ್ಲ ಉತ್ತರಕ್ಕೂ 'ಸೊನ್ನೆ ಸೇರ್ಸಿ' ಬರಿತಾನಂತೆ. ಮೊನ್ನೆ ಇವನ ನರ್ಸರಿ ಟೀಚರ್ ಮಾರ್ಕೆಟ್‌ನಲ್ಲಿ ಸಿಕ್ಕು ಈ ವಿಷ್ಯ ಹೇಳಿದ್ರು. ಇವನ ತಾಯಿ ಈ ವಿಷ್ಯವನ್ನು ನಂಗೆ ತಿಳಿಸಿಯೆ ಇಲ್ಲ...'

ಅಕ್ಷಯಕುಮಾರನ ಮಾತು ಕೇಳಿ ರಾಮಯ್ಯನವರು ಅಕ್ಷರಶಃ ಮೂಕರಾಗಿ ಬೆಪ್ಪಾಗಿದ್ದರು. 'ಇಲ್ಲಿ ಯಾರ ಮಧ್ಯೆ ಶೀತಲ ಸಮರ ನಡೆಯುತ್ತಿದೆ? ತಂದೆ ಮತ್ತು ಮಗುವಿನ ನಡುವೆಯೇ? ಅಥವ ಅಪ್ಪ ಮತ್ತು ಅಮ್ಮನ ನಡುವೆಯೇ?' ಎಂಬ, ಒಂದು ಕ್ಷಣದ ವಿಷಾದಭಾವವು ಅವರನ್ನು ಅವುಚಿಕೊಂಡಂತಾಗಿ, ಅವರು ಕೆಪ್ಪು ಬೆಪ್ಪರಾದರೂ ಮರುಕ್ಷಣದಲ್ಲೇ ತಮ್ಮನ್ನು ತಾವು ಸಾವರಿಸಿಕೊಂಡಿದ್ದರು. ರಾಮಯ್ಯ ಆಳ್ವರು ಹಳೆಯ ಕಾಲದ ಶಿಕ್ಷಣ ಪಡೆದವರಾದರೂ ಮಕ್ಕಳ ಮನಸ್ಸನ್ನು ಅರಳಿಸುವುದರಲ್ಲಿ ಆ ಕಾಲಕ್ಕೆ ಮಾತ್ರವಲ್ಲ, ಈ ಕಾಲಕ್ಕೂ ಅವರು ನಿಜವಾದ ಮಾಸ್ಟರ್‌ರೇ. 'ಬದುಕಿನ ಸತ್ಯವನ್ನು ಅರ್ಥಮಾಡಿಕೊಳ್ಳಲಾಗದ ಈ ಅರೆಬೆಂದ 'ಅಕ್ಕಿ'ಯಲ್ಲಿ ಏನು ಮಾತಾಡಲಿ?' ಎಂದು ಯೋಚಿಸಿದ ರಾಮಯ್ಯನವರು, ತಟ್ಟನೆ ಏನೂ ಮಾತನಾಡಲಾಗದೆ ಒಂದೆರಡು ನಿಮಿಷ ಮೌನವಾಗಿದ್ದುದನ್ನು ಕಂಡ ಕುಮುದ, ತಾನೇನೋ ಮಾತನಾಡಲೆಂದು ಬಾಯ್ತೆರೆದೊಡನೆ, ಅವರು ಕುಮುದಳಿಗೆ ಸುಮ್ಮನಿರುವಂತೆ ಕಣ್ಸನ್ನೆ ಮಾಡಿದ್ದರು. ಮಗಳ ಕುಟುಂಬದಲ್ಲಿನ ಈ ಕಗ್ಗಂಟಲ್ಲದ ಕಗ್ಗಂಟನ್ನು ನೋಡಿದ ರಾಮಯ್ಯನವರು ಆ ಕಗ್ಗಂಟನ್ನು ತಾನು ಒಂದಷ್ಟು ಬಿಡಿಸಲು ಒಂದಿಷ್ಟು ದಿನ ಇಲ್ಲೇ ಇರುವ ತೀರ್ಮಾನಕ್ಕೆ ಬಂದೇಬಿಟ್ಟಿದ್ದರು.